ಕೋಳಿಯ ಪುಕ್ಕಕಿತ್ತು ಮಾಂಸ ಕತ್ತರಿಸಿಕೊಡುವುದರಲ್ಲಿ ಮಗ್ನನಾಗಿದ್ದ ಮಾಮನು, ಕಲೆ ಬಿದ್ದಾವೆಂದು ಅಂಗಿ ಕಳಚಿ ಗೂಟಕ್ಕೆ ನೇತುಹಾಕಿದ್ದನು. ನಾನು ಅವನ ಕಿಸೆಯಲ್ಲಿದ್ದ ಬೀಗದೆಸಳನ್ನು ಎಗರಿಸಿ, ದಸರೆಯ ಬಸ್ಸಿನಂತೆ ಸರ್ವಾಲಂಕಾರಗೊಂಡಿದ್ದ ವಾಹನ ಹತ್ತಿ, ಮೆಲ್ಲಗೆ ಒಳಪೆಟ್ಲು ಹೊರಟೆ. ಹೊಚ್ಚಹೊಸ ಗಾಡಿ. ಹರಿವ ನೀರಲ್ಲಿ ಹುಟ್ಟಿಲ್ಲದೆ ಸಾಗುವ ದೋಣಿಯಂತೆ ಸರಾಗ ಚಲಿಸತೊಡಗಿತು. ರೆಕ್ಕೆಬಲಿತ ಗರುಡಶಿಶು ಮರದಿಂದ ಮೊದಲ ಸಲ ಹಾರಿದಾಗ ಗೂಡನ್ನು ಮರೆತು ದೂರಹೋಗುವಂತೆ, ಊರು ದಾಟಿ ಕೆಮ್ಮಣ್ಣುಗುಂಡಿ ರಸ್ತೆಗೆ ತಿರುವಿಕೊಂಡೆ. ನಿರ್ಜನವಾದ ಈ ರಸ್ತೆಯಲ್ಲಿ ಸೊಗಸಾದ ಇಳಿಜಾರುಗಳಿದ್ದು, ಒಳಪೆಟ್ಲಿನಿಂದ ಸೀಟಿಗೆ ಬಡ್ತಿ ಪಡೆಯಲು ಹೇಳಿ ಮಾಡಿಸಿದಂತಿದ್ದವು. ಬಾಲ್ಯಾವಸ್ಥೆ ಬಿಟ್ಟುಕೊಟ್ಟು ತಾರುಣ್ಯಕ್ಕೆ ಪ್ರವೇಶಿಸುತ್ತಿದ್ದ ನಾನು, ಒಳಪೆಟ್ಲಿನಿಂದ ಸೀಟಿನ ಮೇಲೆ ಆಸೀನನಾದೆ. ಎಲ್ಲೋ ಆಗಸದಲ್ಲಿ ಎತ್ತಿ ಕೂತಂತಾಯಿತು. ಕಾಲಿಗೆ ಸಿಗದ ಪೆಡಲುಗಳನ್ನು ಎಟುಕಿಸಿಕೊಳ್ಳುತ್ತ ಸ್ವರ್ಗದ ಗಾಳಿಯಲ್ಲಿ ವಿಹಾರ ಹೊರಟೆ. ನನ್ನ ಅದೃಷ್ಟ ಖೊಟ್ಟಿಯಿತ್ತು. ಅದೇ ಹೊತ್ತಿಗೆ ಹಕ್ಕಿಪಕ್ಕಿಯರ ಅಲೆಮಾರಿ ಕುಟುಂಬವೊಂದು ಎದುರಾಯಿತು. ಕುದುರೆತಟ್ಟುಗಳ ಮೇಲೆ ಹಕ್ಕಿಹಿಡಿವ ಬಿದಿರುಪಂಜರ, ಪಾತ್ರೆಪಡಗ, ಟೆಂಟು, ಕೌದಿ, ಕೋಳಿ ಹಾಗೂ ಎಳೆಮಕ್ಕಳನ್ನು ಹೇರಿಕೊಂಡ ಸಾಲಂಕೃತ ಕಾರವಾನು. ಅದರ ಮಾಲೀಕರಾದ ದಂಪತಿ ಸ್ವಲ್ಪಹಿಂದೆ ಎಲೆಯಡಕೆ ಜಗಿಯುತ್ತ ಬರುತ್ತಿದ್ದರು. ದೂರದಿಂದಲೇ ಟ್ರಿನ್‌ಟ್ರಿನ್ ಬಾರಿಸಿದೆ. ನನ್ನ ಅಧಃಪತನಕ್ಕೆ ಪಣತೊಟ್ಟಂತಿದ್ದ ತಟ್ಟುಗಳು ಹಾದಿಬಿಡಲಿಲ್ಲ. ಗಾಬರಿಯಲ್ಲಿ ಬ್ರೇಕ್ ಹಾಕುವುದನ್ನು ಮರೆತೆ. ಸೈಕಲು ತಟ್ಟುಗಳ ನಡುವೆ ನುಗ್ಗಿ ಬೆನ್ನಮೇಲಿದ್ದ ಪಾತ್ರೆಪದಾರ್ಥಗಳಿಗೆ ಡಿಕ್ಕಿಹೊಡೆಯಿತು. ಬಿದ್ದ ರಭಸಕ್ಕೆ ಮೊಣಕಾಲು ಉಜ್ಜಿದವು; ಈಳಿಗೆಮಣೆಯಂತಿದ್ದ ರಸ್ತೆ ಕೈಯನ್ನು ತರಿಯಿತು. ತಟ್ಟಿನ ಮೇಲಿದ್ದ ಬಾಲೆ ನೆಲಕ್ಕೆ ಬಿದ್ದು, ಪೆಟ್ಟಾಗಿರದಿದ್ದರೂ ಹೋ ಎಂದು ಅರಚತೊಡಗಿದಳು. ಅವಳಪ್ಪ ಧಾವಿಸಿ ಬಂದವನೆ ನನ್ನ ರಟ್ಟೆಯನ್ನು ನುಲಿದು, ಕುಂಡೆಯ ಮೇಲೆ ಕೈಬರಲಿನಿಂದ ನಾಕು ಸೆಣೆದನು. ಮನೆಯಲ್ಲೂ ಶಾಲೆಯಲ್ಲೂ ಹೊಡೆತ ತಿಂದು ತರಬೇತಿ ಇದ್ದುದರಿಂದ ಅಥವಾ ಗಾಬರಿಯಿಂದ ಅಂಥ ನೋವು, ಅಪಮಾನವೇನೂ ಆಗಲಿಲ್ಲ. ಆದರೆ ಸೈಕಲ್ಲು ನೆಲಕ್ಕೆ ಬಿದ್ದಿದ್ದು ಕಂಗಾಲುಗೊಳಿಸಿತ್ತು. ಬಾಲೆಯ ಅಪ್ಪ ಸೈಕಲನ್ನು ಎತ್ತಿ ಸೈಡಿಗೊಗೆದು, ನನ್ನನ್ನು ಅಲ್ಲಿದ್ದ ಮೈಲುಗಂಬಕ್ಕೆ ಕಟ್ಟಿಹಾಕಿದನು. (ನನ್ನ ಜೀವನದಲ್ಲಿ ಸಾಧನೆಯ ಪ್ರಥಮ ಮೈಲಿಗಲ್ಲದು). ಮಗಳಿಗೆ ಪೆಟ್ಟಾಗಿರುವುದರಿಂದ ಎರಡು ರೂಪಾಯಿ ದಂಡಕಟ್ಟಬೇಕೆಂದು ಬೇಡಿಕೆಯಿಟ್ಟನು. ಕಟ್ಟಿಹಾಕಿ ಬಡಿದರೂ ಕಾಸಿಲ್ಲ. ಕೊನೆಗೆ ನೆಲವೇ ಬಿರಿಯುವಂತೆ ಅಳುವುದೊಂದೇ ಬಿಡುಗಡೆಯ ಹಾದಿಯೆಂದು ಹೊಳೆಯಿತು. ನನ್ನ ಅಳುವಿನ ಅಬ್ಬರಕ್ಕೆ ಚಿಕ್ಕಬಾಲೆ ತನ್ನ ರೋದನ ನಿಲ್ಲಿಸಬೇಕಾಯಿತು. ಕಾರವಾನು ಎಲ್ಲೋ ದೂರ ಹೋಗಬೇಕಿತ್ತು. ಬಾಲೆಯ ತಾಯಿ, ಅವಳ ಹೊಟೆ ತಣ್ಣಗಿರಲಿ, ಕರುಣೆಯಿಂದ ಬಂದು, 'ಹೋಗಲಿಬಿಡು' ಎಂದು ಕಟ್ಟನ್ನು ಬಿಚ್ಚಿದಳು. ಆದರೆ ಆಕೆಯ ದುಷ್ಟಗಂಡ ನನ್ನ ಕಿವಿಯನ್ನೊಮ್ಮೆ ಹಿಂಡುವ ಮೂಲಕ ಶಿಕ್ಷಾ ಕಾರ್ಯಕ್ರಮಕ್ಕೆ ಮುಕ್ತಾಯ ಹಾಡಿದನು.

ಗಾಯಗೊಂಡ ದೇಹವನ್ನೂ ಸೈಕಲನ್ನೂ ತಳ್ಳಿಕೊಂಡು ಮನೆಗೆ ಬಂದೆ. ಮಾಮನು ಕಾದು ಬೇಸರದಿಂದ ಹೊರಟುಹೋಗಿದ್ದನು. ಅಮ್ಮ ಗಾಬರಿಯಾಗಿದ್ದಳು. ನನ್ನ ದುರವಸ್ಥೆ ಕಂಡು, ಸತ್ತಿಲ್ಲ ಎಂಬ ಸಮಾಧಾನದಿಂದಲೂ ಸೈಕಲನ್ನು ನೆಗ್ಗಿಸಿಕೊಂಡು ಬಂದ ಸಿಟ್ಟಿನಿಂದಲೂ, ನಾಲ್ಕು ಹೇರಿದಳು. ಬಟ್ಟೆ ಕಳಚಿ, ಮೈತೊಳೆದು ಉಣಲಿಕ್ಕಿದಳು. ಅದುವೇ ಸೈಕಲಾಪಹರಣದ ಕೊನೆ.